ಸಮಸ್ತ ಕನ್ನಡಿಗರ ಏಕೈಕ ಸಂಜೆ ದಿನಪತ್ರಿಕೆ

ಈ ಸಂಜೆ

**Tuesday, December 13, 2011**

# ರಂಗಭೂಮಿ ಉತ್ಸವ

**ಬೆಂಗಳೂರು, ಡಿ.13–** ಜೈನ್ ವಿಶ್ವ ವಿದ್ಯಾಲಯ ನಡೆಸುತ್ತಿರುವ ಅಭಿನಯ ರಾಷ್ಟ್ರೀಯ ರಂಗಭೂಮಿ ಉತ್ಸವದಲ್ಲಿ ಪಾಲ್ಗೊಳ್ಳಲಿಚ್ಛಿಸುವ ಸ್ಪರ್ಧಿಗಳು ಡಿ.17ರೊಳಗೆ ಹೆಸರು ನೊಂದಾಯಿಸಿಕೊಳ್ಳಬೇಕು.

ನಾಟಕ ಸ್ಪರ್ಧೆಯ ವಿಜೇತರಿಗೆ 1 ಲಕ್ಷ ರೂ. ಬಹುಮಾನ ನೀಡಲಾಗುವುದು. ಇದಲ್ಲದೆ ನಾಟಕಗಳಿಗೆ ಉತ್ತಮ ನಿರ್ದೇಶಕ, ಉತ್ತಮ ನಟ, ನಟಿ, ಉತ್ತಮ ಹಾಸ್ಯ ನಟ, ಉತ್ತಮ ವೇದಿಕೆ ವಿನ್ಯಾಸಗಾರ, ಉತ್ತಮ ಬೆಳಕು, ವಸ್ತ್ರ ಮತ್ತು ಮೇಕಪ್ ಉತ್ತಮ ಪೋಷಕ, ನಟ ಪಾತ್ರಗಳಿಗೂ ತಲಾ ಪ್ರಥಮ ಬಹುಮಾನ ಸಾವಿರ ರೂ. ನಗದು ಹಾಗೂ ಟ್ರೋಫಿ ನೀಡಲಾಗುವುದು ಎಂದು ಜೈನ್ ವಿವಿ ತಿಳಿಸಿದೆ. ಆಸಕ್ತರು ಹೆಚ್ಚಿನ ವಿವರಗಳಿಗೆ www.cms.ac.in ಸಂಪರ್ಕಿಸಬಹುದು.